ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಹಣ ಇಲ್ಲ, ಹಣ ಕೊಡದೆ ಕೆಲಸ ಹೇಗೆ ಆಗುತ್ತದೆ?

(ಗೊಂದಲ)

ಅಧ್ಯಕ್ಷರು : ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

ಶ್ರೀ ಸಿ. ಬೈರೇಗೌಡ : ಇದು ಬಹಳ ಸರಳ ಇದೆ. ಬಡ್ಜೆಟ್ ಪ್ರಾವಿಷನ್ ಎಷ್ಟು? ಇದುವರೆಗೆ ರಿಲೀಸ್ ಆಗಿರತಕ್ಕದ್ದು ಎಷ್ಟು ಎಂದು ಹೇಳಬೇಕು. ಆಗ ಸಮಸ್ಯೆ ಉದ್ಭವವಾಗುವುದಿಲ್ಲ.

Sri. M.Y. Ghorpade : I have given the complete and correct answer. The question was, how much money released. I have answered that it is Rs. 9.57 crores.

ಬೀದರ್‌ಗೆ 9.57 ಕೋಟಿ ಎಂದು ಹೇಳಿದ್ದೇನೆ. ಡಿಸೆಂಬರ್ ಕೊನೆಯವರೆಗೆ ಒಟ್ಟಾರೆ 1193 ಕೋಟಿ ಬಿಡುಗಡೆ ಆಗಿದೆ. ಮಾರ್ಚ್ ಕೊನೆಯವರೆಗೆ ಲೆಕ್ಕ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಫೆಬ್ರವರಿ ಒಳಗೆ ಪೂರ್ಣ ಹಣ ಬಿಡುಗಡೆ ಮಾಡುತ್ತೀರಾ?

Sri. M.Y. Ghorpade : Whatever is possible we will do. We are aware that Bidar is a backward district and backward area. We shall not neglect it. We shall release money.

ಗುಲ್ಬರ್ಗಾ ಜಿಲ್ಲೆಯಲ್ಲಿ ರೈತರಿಗೆ ಬೆಳೆ ಪರಿಹಾರ

177-ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಬೆಳೆ ನಾಶವಾಗಿರುವುದರಿಂದ ಪರಿಹಾರಧನ ಮಂಜೂರು ಮಾಡಿ ಕೆಲವು ರೈತರಿಗೆ ವಿತರಣೆ ಮಾಡಿ ಕೆಲವರಿಗೆ ವಿತರಣೆ ಮಾಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈಗಲಾದರೂ ಸಹ ಮಂಜೂರಾಗಿರುವ ಪರಿಹಾರ ಧನವನ್ನು ಕೂಡಲೇ ವಿತರಣೆ ಮಾಡಲು ವ್ಯವಸ್ಥೆ ಮಾಡಿ ರೈತರಿಗೆ ಅನುಕೂಲ ಮಾಡಿ ಕೊಡಲಾಗುವುದೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):

ಅ) ಬಂದಿರುತ್ತದೆ.

ಆ) ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಬೆಳೆ ನಾಶವಾಗಿದ್ದಕ್ಕೆ ಪರಿಹಾರವಾಗಿ ಒಟ್ಟು 9.75 ಕೋಟಿ ರೂ.ಗಳನ್ನು ಮಂಜೂರು ಮಾಡಿದ್ದು ಅದರಲ್ಲಿ 7.6733 ಕೋಟಿ ರೂ.ಗಳು ಬಿಡುಗಡೆಯಾಗಿದ್ದು ಪೂರ್ಣ ವಿತರಣೆಯಾಗಿರುತ್ತದೆ. ಉಳಿದ 2.0767 ಕೋಟಿ ರೂ.ಗಳನ್ನು ಅತೀ ಶೀಘ್ರವಾಗಿ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಮಾನ್ಯ ಅಧ್ಯಕ್ಷರೇ, ನನ್ನ ಎರಡನೆಯ ಪ್ರಶ್ನೆಗೆ ಉತ್ತರವಾಗಿ ಒಟ್ಟು 9.75 ಕೋಟಿ ಮಂಜೂರು ಮಾಡಿದ್ದು 7.67 ಕೋಟಿ ಬಿಡುಗಡೆ ಮಾಡಲಾಗಿದ್ದು, ಉಳಿದ 2.07 ಕೋಟಿ ರೂಪಾಯಿಗಳನ್ನು ಶೀಘ್ರವಾಗಿ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದಿದ್ದಾರೆ. ಮಾನ್ಯ ಅಧ್ಯಕ್ಷರೇ ನಾವು ಶಾಸಕರು ನಮ್ಮ ಕ್ಷೇತ್ರದಲ್ಲಿರತಕ್ಕ ಗ್ರಾಮಗಳಿಗೆ ಭೇಟಿ ನೀಡಿದಾಗ ಪರಿಹಾರಧನ

ಸಿಗಲಾರದ ರೈತರು ನಮ್ಮನ್ನು, ನಮ್ಮ ಸರ್ಕಾರವನ್ನ ದೂಶಿಸುತ್ತಿದ್ದಾರೆ. ಆದ್ದರಿಂದ ಈ ಉಳಿದಿರತಕ್ಕ 2 ಕೋಟಿ ರೂಪಾಯಿ ಹಣವನ್ನು ಈ ಅಧಿವೇಶನದ ಅವಧಿಯಲ್ಲಿ ವಿತರಣೆ ಮಾಡುವ ವ್ಯವಸ್ಥೆ ಮಾಡಿ ನಮ್ಮ, ಹಾಗೂ ನಮ್ಮ ಸರ್ಕಾರದ ಘನತೆಯನ್ನು ಹೆಚ್ಚು ಮಾಡಬಹುದೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಅಧ್ಯಕ್ಷರೇ, ನಮ್ಮ ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆ ಮಾಡಿ ಈ ಹಣ ಆದಷ್ಟು ಬೇಗ ಬಿಡುಗಡೆ ಆಗಲಿಕ್ಕೆ ಕ್ರಮ ತೆಗೆದುಕೊಂಡ ಅವಶ್ಯಕವಾಗಿ ಯಾರಿಗೆ ಹಣ ಕೊಡಬೇಕೋ ಅವರಿಗೆ ಆ ಹಣ ಕೊಡುವ ವ್ಯವಸ್ಥೆಯನ್ನು ಖಂಡಿತಾ ಮಾಡುತ್ತೇನೆ.

ಶ್ರೀ ಬಾಬುರಾವ್ ಚೌವಾಣ್ : ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆಯಲ್ಲಿ ಇನ್ನೂ 2.50 ಕೋಟಿ ರೂಪಾಯಿ ಬಿಡುಗಡೆ ಆಗಿಲ್ಲ. ನಮ್ಮ ಪೂರಾ ಜಿಲ್ಲೆಯಲ್ಲಿ ಹೀಗೆ ಬೆಳೆ ನಾಶಗೊಂಡ ರೈತರ ಬಗ್ಗೆ ಸರ್ವೇ ಮಾಡಿ ನೋಡಿದ ಪ್ರಕಾರ ಇನ್ನೂ $2\frac{1}{2}$ ಕೋಟಿ ರೂಪಾಯಿ ನಮಗೆ ಬೇಕಾಗಿದೆ. ಈಗ ಕೆಲವರಿಗೆ ಕೊಟ್ಟು ಕೆಲವರಿಗೆ ಕೊಡದಿರುವುದರಿಂದ ಎಲ್ಲ ನಮ್ಮನ್ನು ಕೇಳುತ್ತಿದ್ದಾರೆ. ಹೀಗೆ ಮಾಡುವುದರಿಂದ ಆ ರೈತರಿಗೆ ಅನ್ಯಾಯ ಮಾಡಿದಹಾಗೆ ಆಗುತ್ತದೆಂದು ಶಾಸಕರನ್ನು ಕೇಳುತ್ತಿದ್ದಾರೆ. ಪಕ್ಕದ ಜಮೀನಿನವರಿಗೆ ಕೊಟ್ಟು ನಮಗೆ ಏಕೆ ಕೊಟ್ಟಿಲ್ಲ ಎಂದು ಕೇಳುತ್ತಾರೆ. ನಮ್ಮ ಜಿಲ್ಲೆಯಲ್ಲಿ ಎಲ್ಲರಿಗೂ ಸರಿಸಮಾನ ರೀತಿಯಲ್ಲಿ ಪರಿಹಾರ ಧನವನ್ನು ಎಲ್ಲರಿಗೂ ಕೊಡುತ್ತೀರಾ? $2\frac{1}{2}$ ಕೋಟಿ ರೂಪಾಯಿಗಳನ್ನು ಬೇಗನೆ ರಿಲೀಸ್ ಮಾಡುತ್ತೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನೂ ಕೂಡ ಒಂದು ವಾರ ಪ್ರವಾಸ ಮಾಡಿ ಬಂದಿದ್ದೇನೆ. ಇವತ್ತು ಬೆಳೆ ನಾಶದ ಬಗ್ಗೆ ಏನು ನೀವು ಒಂದು ಕೋಟಿ ರೂಪಾಯಿಗಳವರೆಗೆ ಚೆಕ್‌ಗಳನ್ನು ಕೊಟ್ಟಿದ್ದೀರೋ ಆ ಚೆಕ್ಕಗಳು ಇದುವರೆಗೂ ಬ್ಯಾಂಕ್‌ನಲ್ಲಿ ಕ್ಯಾಷ್ ಆಗಿರುವುದಿಲ್ಲ. ಬೇಕಿದ್ದರೆ ತಾವು ಈ ಬಗ್ಗೆ ತಾವು ಜಿಲ್ಲಾಧಿಕಾರಿಗಳ ಹತ್ತಿರ ಮಾಹಿತಿ ತರಿಸಿಕೊಳ್ಳಿ. ತೊಗರಿ ಬೆಳೆ ನಾಶದ ಬಗ್ಗೆ ಕೊಟ್ಟಿರುವ ಪರಿಹಾರಧನದ ಚೆಕ್ಕಗಳು ನಗದಾಗುತ್ತಿಲ್ಲ. ಜೊತೆಗೆ ಇನ್ನೂ 2.07 ಕೋಟಿ ರೂಪಾಯಿ ಏನು ಬಿಡುಗಡೆ ಮಾಡಿಲ್ಲ ಅದನ್ನು ಬಿಡುಗಡೆ ಮಾಡುವುದರ ಜೊತೆಗೆ ಕೊಟ್ಟಿರುವ ಚೆಕ್ಕಗಳು ಕ್ಯಾಷ್ ಆಗುವ ಬಗ್ಗೆ ಸರ್ಕಾರ ಗಮನ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಸದಸ್ಯರು ಸಲಹೆ ಮಾಡಿದಹಾಗೆ ಈಗ ಚೆಕ್ ಕೊಟ್ಟಿದ್ದು, ಹಣ ಅವರಿಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲದೇ ಇರುವುದರ ಬಗ್ಗೆ ಖಂಡಿತವಾಗಿ ಕೂಡಲೇ ಮುಂದಿನ ಕಾರ್ಯಕ್ರಮ ತೆಗೆದುಕೊಂಡು ಅವರಿಗೆ.....

ಶ್ರೀ ವಾಟಾಳ್ ನಾಗರಾಜ್ : ಹಣ ಇಲ್ಲದೇ ತಾವು ಚೆಕ್ ಕೊಟ್ಟಿದ್ದೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ನೀವು ಹೇಳಿದಹಾಗೆ ವ್ಯವಹಾರ ಮಾಡುವುದಕ್ಕಾಗುವುದಿಲ್ಲ. ಸಾಧ್ಯವಾದಷ್ಟು ಬೇಗ ಕೊಡಿಸಿಕೊಡುವ ಪ್ರಯತ್ನ ಮಾಡುತ್ತೇವೆ. ಜೊತೆಗೆ ಇನ್ನೂ ಸುಮಾರು 2 ಕೋಟಿ ರೂಪಾಯಿ ಏನು ಬಿಡುಗಡೆ ಮಾಡಬೇಕಾಗಿದೆ ಅದನ್ನು ಕೊಡುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇನೆ.